



| ಸಾಧನೆಗಳ ದಾರಿಯಲ್ಲಿ | | | |
|---|---|---|---|
| ಟೂರ್ನಿ | ವರ್ಷ | ಎದುರಾಳಿ | ಫಲಿತಾಂಶ |
| ಮಾಲ್ದೀವ್ಸ್ ಇಂಟರ್‌ನ್ಯಾಷನಲ್ | 2012 | ಜುಲ್ಫಾದ್ಲಿ ಜುಲ್ಕಿಫ್ಲಿ | ವಿಜೇತ |
| ಥಾಯ್ಲೆಂಡ್ ಓಪನ್ | 2013 | ಬೂನ್ಸಕ್ ಪೊನ್ಸಾನ | ವಿಜೇತ |
| ಚೀನಾ ಓಪನ್ | 2014 | ಲಿನ್ ಡ್ಯಾನ್ | ವಿಜೇತ |
| ಸಯ್ಯದ್ ಮೋದಿ ಇಂಟರ್‌ನ್ಯಾಷನಲ್ | 2014 | ಕ್ಸ್ಯು ಸಾಂಗ್ | ರನ್ನರ್ ಅಪ್ |
| ಇಂಡಿಯಾ ಓಪನ್ | 2015 | ವಿಕ್ಟರ್ ಅಕ್ಸೆಲ್ಸನ್ | ವಿಜೇತ |
| ಸಯ್ಯದ್ ಮೋದಿ ಇಂಟರ್‌ನ್ಯಾಷನಲ್ | 2015 | ಪರುಪಳ್ಳಿ ಕಶ್ಯಪ್ | ವಿಜೇತ |
| ಸ್ವಿಸ್ ಓಪನ್ | 2015 | ವಿಕ್ಟರ್ ಅಕ್ಸೆಲ್ಸೆನ್ | ವಿಜೇತ |
| ಇಂಡೋನೇಷ್ಯಾ ಮಾಸ್ಟರ್ಸ್ | 2015 | ಟೋಮಿ ಸುಜಿಯಾರ್ಟೊ | ರನ್ನರ್ ಅಪ್ |
| ದಕ್ಷಿಣ ಏಷ್ಯಾ ಕ್ರೀಡಾಕೂಟ | 2016 | ಎಚ್.ಎಸ್.ಪ್ರಣಯ್ | ಚಿನ್ನ |
| ಸಯ್ಯದ್ ಮೋದಿ ಇಂಟರ್‌ನ್ಯಾಷನಲ್ | 2016 | ಹುಯಾಂಗ್‌ಯುಕ್ಸಿಯಾಂಗ್ | ವಿಜೇತ |
| ಸಿಂಗಪುರ ಓಪನ್ | 2017 | ಬಿ.ಸಾಯ್ ಪ್ರಣೀತ್ | ರನ್ನರ್ ಅಪ್ |
| ಇಂಡೊನೇಷ್ಯಾ ಓಪನ್ | 2017 | ಕಜುಮಾಸ ಸಕಾಯ್ | ವಿಜೇತ |
| ಆಸ್ಟ್ರೇಲಿಯಾ ಓಪನ್ | 2017 | ಚೆನ್ ಲಾಂಗ್ | ವಿಜೇತ |

ಮಣಿಸಿ ಪ್ರಶಸ್ತಿ ಗೆದ್ದಿದ್ದರು. ಈ ಟೂರ್ನಿಯಲ್ಲಿ ಪ್ರಸಸ್ತಿ ಗೆದ್ದ ಮೊದಲ ಭಾರತೀಯ ಎಂಬ ಕೀರ್ತಿ ಅವರ ಪಾಲಿನದ್ದಾಗಿತ್ತು.

ಒಲಿಂಪಿಕ್ ಚಾಂಪಿಯನ್‌ಗಳ ವಿರುದ್ಧವೂ ಶ್ರೀಕಾಂತ್‌ಗೆ ಗೆಲುವು ಅಪರೂಪವೇನಲ್ಲ. 2014ರಲ್ಲಿ ಚೀನಾದ ಲಿನ್ ಡ್ಯಾನ್ ಅವರನ್ನು ಚೀನಾ ಓಪನ್ ಸೂಪರ್ ಸೀರಿಸ್‌ನ ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಮಣಿಸಿ ಪ್ರಶಸ್ತಿ ಎತ್ತಿ ಹಿಡಿದಿದ್ದರು. ಶ್ರೀಕಾಂತ್ ಹೈದರಾಬಾದ್‌ನ ಪುಲ್ಲೇಲ ಗೋಪಿಚಂದ್ ಗರಡಿಯಲ್ಲಿ ಪಳಗಿದ ಆಟಗಾರ.

## ಬೆಳಗಿದ ಪ್ರತಿಭೆ

2011ರ ಕಾಮನ್‌ವೆಲ್ತ್ ಯುವ ಕ್ರೀಡಾಕೂಟದಲ್ಲಿ ಶ್ರೀಕಾಂತ್ ಪ್ರತಿಭೆ ಬೆಳಕಿಗೆ ಬಂದಿತ್ತು. ಆ ಕೂಟದ ಮಿಶ್ರ ಡಬಲ್ಸ್‌ನಲ್ಲಿ ಬೆಳ್ಳಿ ಹಾಗೂ ಡಬಲ್ಸ್‌ನಲ್ಲಿ ಕಂಚು ಗೆದ್ದ ಅವರು ಅಖಿಲ ಭಾರತ ಜೂನಿಯರ್ ಬ್ಯಾಡ್ಮಿಂಟನ್‌ನ ಸಿಂಗಲ್ಸ್ ಮತ್ತು ಡಬಲ್ಸ್‌ನ ಚಿನ್ನ ಗೆದ್ದು ಗೆಲುವಿನ ಅಭಿಯಾನ ಮುಂದುವರಿಸಿದ್ದರು. ಮುಂದಿನ ವರ್ಷ ಜೂನಿಯರ್ ವಿಶ್ವ ಚಾಂಪಿಯನ್ ಜುಲ್ಫಾದ್ಲಿ ಜುಲ್ಕಿಫ್ಲಿ ಅವರನ್ನು ಮಣಿಸಿ ಮಾಲ್ದೀವ್ಸ್ ಅಂತರರಾಷ್ಟ್ರೀಯ ಚಾಲೆಂಜ್ ಟೂರ್ನಿಯ ಪ್ರಶಸ್ತಿ ಗೆದ್ದಿದ್ದರು. ದೈತ್ಯರನ್ನು ಹಣಿಯುವ ಅವರ ಸಾಹಸಕ್ಕೆ ನಾಂದಿಯಾದದ್ದು ಇಲ್ಲಿಂದಲೇ. ಮುಂದಿನ ವರ್ಷ ಅಖಿಲ ಭಾರತ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಗಿನ ಚಾಂಪಿಯನ್ ಮತ್ತು ಒಲಿಂಪಿಯನ್ ಪರುಪಳ್ಳಿ ಕಶ್ಯಪ್ ವಿರುದ್ಧ ಗೆದ್ದು ಮೊದಲ ಬಾರಿ ಸೀನಿಯರ್ ಪ್ರಶಸ್ತಿಯ ಸಂಭ್ರಮ ಅನುಭವಿಸಿದ್ದರು.

2014ರ ಬ್ಯಾಡ್ಮಿಂಟನ್ ಋತು ಅವರ ಪಾಲಿಗೆ ಅತ್ಯಪೂರ್ವವಾಗಿತ್ತು. ಇಂಡಿಯಾ ಓಪನ್ ಗ್ರ್ಯಾನ್‌ಪ್ರಿಯಲ್ಲಿ 'ರನ್ನರ್ ಅಪ್' ಆದ ಅವರು, ಮಲೇಷ್ಯಾ ಓಪನ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಚೀನಾ ಓಪನ್ ಸೀರೀಸ್ ಪ್ರೀಮಿಯರ್‌ನಲ್ಲಿ ಅವರ ಸಾಧನೆ ಮುಗಿಲೆತ್ತರಕ್ಕೆ ಏರಿತು. ಈ ಸರಣಿಯ ಫೈನಲ್‌ನಲ್ಲಿ ಅವರು ಮಣಿಸಿದ್ದು ಐದು ಬಾರಿಯ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಯನ್ ಆಗಿದ್ದ ಲಿನ್ ಡ್ಯಾನ್ ಅವರನ್ನು. ಈ ಪ್ರಶಸ್ತಿಯೊಂದಿಗೆ ಸೂಪರ್ ಸರಣಿ ಗೆದ್ದ ಮೊದಲ ಭಾರತೀಯ ಪುರುಷ ಆಟಗಾರ ಎಂಬ ದಾಖಲೆಯನ್ನು ತಮ್ಮದಾಗಿಸಿಕೊಂಡರು.

ಬಳಿಕ ನಡೆದ ಹಾಂಗ್‌ಕಾಂಗ್ ಸೂಪರ್ ಸರಣಿಯ ಫೈನಲ್ ಪ್ರವೇಶಿಸಿದ ಕಿದಂಬಿ ವಿಶ್ವ ಸೂಪರ್ ಸರಣಿ ಫೈನಲ್‌ಗೂ ಪ್ರವೇಶ ಪಡೆದರು. ಬಿಡಬ್ಲ್ಯುಎಫ್ ಸೂಪರ್ ಸರಣಿ ಮಾಸ್ಟರ್ಸ್‌ನ ಫೈನಲ್‌ವರೆಗೂ ತಲುಪಿ ಗಮನ ಸೆಳೆದರು.

2015ರಲ್ಲಿ ಸ್ವಿಸ್ ಓಪನ್ ಗ್ರ್ಯಾನ್‌ಪ್ರಿ ಚಿನ್ನ ಗೆದ್ದ ಮೊದಲ ಭಾರತೀಯ ಎಂಬ ಖ್ಯಾತಿ ಅವರದಾಯಿತು. 2016ರ ಏಷ್ಯಾ ಕ್ರೀಡಾಕೂಟದ ಬ್ಯಾಡ್ಮಿಂಟನ್‌ನಲ್ಲಿ ಎರಡು ಚಿನ್ನ ಗೆದ್ದ ಕಿದಂಬಿ ಅವರು ಸೈಯ್ಯದ್ ಮೋದಿ ಗ್ರ್ಯಾನ್‌ಪ್ರಿಯಲ್ಲೂ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಮಲೇಷ್ಯಾ ಮಾಸ್ಟರ್ಸ್‌ನ ಸೆಮಿಫೈನಲ್‌ಗೂ ಲಗ್ಗೆ ಇಟ್ಟರು. ರಿಯೊ ಒಲಿಂಪಿಕ್ಸ್‌ನ ಕ್ವಾರ್ಟರ್ ಫೈನಲ್‌ವರೆಗೂ ಅವರ ಅಭಿಯಾನ ಮುಂದುವರಿಯಿತು. ವೃತ್ತಿಜೀವನದಲ್ಲಿ ಒಟ್ಟು 138 ಪಂದ್ಯಗಳನ್ನು ಗೆದ್ದಿರುವ ಶ್ರೀಕಾಂತ್ ಸೋಲು ಕಂಡದ್ದು 75 ಬಾರಿ ಮಾತ್ರ. ಒಂಬತ್ತು ಪ್ರಶಸ್ತಿಗಳನ್ನು ಗೆದ್ದಿರುವ ಶ್ರೀಕಾಂತ್ 2015ರಲ್ಲಿ ವಿಶ್ವ ಕ್ರಮಾಂಕದಲ್ಲಿ ಗರಿಷ್ಠ ಮಟ್ಟ (3) ತಲುಪಿದ್ದರು.